ಮಧ್ಯದಲ್ಲಿ ಬರುವ 40 ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವ ಕ್ರಮ ಕೈಗೊಳ್ಳಲಾಗಿದೆಯೇ?

2 ಕೈಗೊಂಡಿದ್ದರೆ ಈವರೆವಿಗೆ ಮಾಡಲಾಗಿರುವ ಕ್ರಮಗಳೇನು?

ಉತ್ತರ

1 ಹೌದು, ಗುಂಡ್ಲುಪೇಟೆ ಮತ್ತು ಮಾರ್ಗ ಮಧ್ಯದಲ್ಲಿ ಬರುವ 40 ಗ್ರಾಮಗಳಿಗೆ ಕಬಿನಿ ನದಿಯಿಂದ ಕುಡಿಯುವ ನೀರು ಒದಗಿಸುವ ಪ್ರಾದೇಶಿಕ ನೀರು ಸರಬರಾಜು ಯೋಜನೆಯನ್ನು ಕೈಗೆತ್ತಿಕೊಂಡಿದ್ದು ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ

2 ಈ ಕಾಮಗಾರಿಯ ಮೂಲ ಸ್ಥಾವರ ಜಲ ಶುದ್ಧೀಕರಣಾಗಾರ ಮಧ್ಯಂತರ ನೀರೆತ್ತುವ ಸ್ಥಾವರ ಮತ್ತು 2 ಸಂಖ್ಯೆಯ 10 ಲಕ್ಷ ಲೀಟರ್ ಸಾಮರ್ಥ್ಯದ ಓವರ್ ಹೆಡ್ ಟ್ಯಾಂಕ್ ಕೆಲಸಗಳು ಮುಗಿದಿರುತ್ತದೆ ಮೂಲ ಸ್ಥಾವರದಿಂದ ಗುಂಡ್ಲುಪೇಟೆ ವಟ್ಟಣದವರೆಗೆ 500 ಮಿ ಮಿ ವ್ಯಾಸದ 33,850 ಮೀ ಉದ್ದದ ಪಿ ಎಸ್ ಸಿ ಏರು ಕೊಳವೆ ಮಾರ್ಗದ ಕಾಮಗಾರಿಯಲ್ಲಿ ಈಗಾಗಲೇ 33,645 ಮೀ ಕೊಳವೆಗಳು ಸರಬರಾಜಾಗಿದ್ದು 29 715 ಮೀ ಕೊಳವೆಗಳನ್ನು ಅಳವಡಿಸಲಾಗಿದೆ ಅಲ್ಲದೆ 500 ಮೀ ಮೀ ವ್ಯಾಸದ 6,341ಮೀ ಉದ್ದದ ಎಂ ಎಸ್ ಕೊಳವೆ ಮಾರ್ಗದ ಕಾಮಗಾರಿಯು ಮುಗಿದಿರುತ್ತದೆ ಉಳಿಕೆ ಕಾಮಗಾರಿ ಪ್ರಗತಿಯಲ್ಲಿರುತ್ತದೆ ಮೂಲ ಸ್ಥಾವರ ಜಲಶುದ್ಧೀಕರಣಾಗಾರ ಮತ್ತು ಮಧ್ಯಂತರ ಪಂಪು ಮನೆಯ ಪಂಪ್‌ಸೆಟ್‌ಗಳು ಸರಬರಾಜಾಗಿದ್ದು ಅಳವಡಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ ಈ ಯೋಜನೆಯನ್ನು ಮಾರ್ಚಿ 2002ರಲ್ಲಿ ಚಾಲನೆಗೊಳಿಸಲು ಯೋಜಿಸಲಾಗಿದೆ

ಅಡಿಕೆ ವಹಿವಾಟಿನಲ್ಲಿ ಸಂಗ್ರಹಿಸಲಾದ ವಾಣಿಜ್ಯ ತೆರಿಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 127(99)

ಸದಸ್ಯರ ಹೆಸರು ಶ್ರೀ ಸದಾನಂದ ಗೌಡ ಡಿ ವಿ (ಪುತ್ತೂರು)

ಉತ್ತರಿಸುವ ಸಚಿವರು ಶ್ರೀ ಎಸ್ ಎಂ ಕೃಷ್ಣ (ಮುಖ್ಯ ಮಂತ್ರಿಗಳು)

ಪ್ರಶ್ನೆ

ಅ) ಕಳೆದ 3 ವರ್ಷಗಳಲ್ಲಿ ಕರ್ನಾಟಕ ವಾಣಿಜ್ಯ ತೆರಿಗೆ ಕಾಯ್ದೆಯ ಅಡಿಯಲ್ಲಿ ಅಡಿಕೆ

ವ್ಯವಹಾರದಲ್ಲಿ ಸಂಗ್ರಹವಾದ ಒಟ್ಟು ವಾಣಿಜ್ಯ ತೆರಿಗೆ ಎಷ್ಟು (ಪ್ರತಿ ವರ್ಷದ ನರಾಸರಿ ತೆರಿಗೆ ಮತ್ತು ಸಂಗ್ರಹವಾದ ಮೊತ್ತದ ವಿವರ ನೀಡುವುದು)

ಆ) ಈ ಮೊತ್ತದಲ್ಲಿ ಪ್ರತಿ ವರ್ಷ ಕ್ಯಾಂಪ್ಕೋ ಸಂಸ್ಥೆಯಿಂದ ಸಂಗ್ರಹವಾದ ಮಾರಾಟ ತೆರಿಗೆ ಎಷ್ಟು?

ಉತ್ತರ

ಅ) ಕಳೆದ 3 ವರ್ಷಗಳಲ್ಲಿ ಅಡಿಕೆಯ ಮೇಲೆ ಇದ್ದ ತೆರಿಗೆ ಮೊತ್ತದ ವಿವರ ಈ ಕೆಳಕಂಡಂತೆ ಇದೆ

ವರ್ಷ	ತೆರಿಗೆ ದರ (ಶೇಕಡ)	ಸಂಗ್ರಹವಾದ ತೆರಿಗೆ (ರೂ ಲಕ್ಷಗಳಲ್ಲಿ)
1 98-99	4	4,173 34
2 99-00	4 ಮತ್ತು 8	5 333,39
3 2000-2001	4	5 138,33

ಆ) ಕ್ಯಾಂಪ್ಕೊ ಸಂಸ್ಥೆಯಿಂದ ಅಡಿಕೆ ಮಾರಾಟದ ವಹಿವಾಟಿನ ಮೇಲೆ ಸಂಗ್ರಹವಾದ ತೆರಿಗೆ ವಿವರ ಈ ಕೆಳಕಂಡಂತೆ ಇದೆ

ವರ್ಷ	ಸಂಗ್ರಹವಾದ ತೆರಿಗೆ
1 1998-99	ರೂ 365 50 ಲಕ್ಷಗಳು
2 1999-00	ರೂ 393 53 ಲಕ್ಷಗಳು
3 2000-01	ರೂ 350 58 ಲಕ್ಷಗಳು

ಹಾಸನ ಜಿಲ್ಲೆಯಲ್ಲಿ ಅಬ್ಕಾರಿ ಬಾಕಿ ವಸೂಲಾತಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 128(403)

ಸದಸ್ಯರ ಹೆಸರು ಶ್ರೀ ಬಿ ಶಿವರಾಮು(ಗಂಡಸಿ)